ಇಂದು ದಿನಾಂಕಃ 23.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ ಆರ್ ಬಿ ಕೆ ವಕೀಲರಿಂದಃ

ನಾನು ಸುಮಾರು 15 ವರ್ಷಗಳಿಂದ ಮನೆತನವನ್ನು ಮಾಡುತ್ತಿದ್ದೇನೆ. ಆ ರೀತಿ ನಾನು ಮನೆತನ ಮಾಡುತ್ತಿರುವ ಕಾಲದಿಂದಂದಲೂ ನಮ್ಮ ಮನೆತನಕ್ಕೆ ಸೇರಿದ ಜಮೀನುಗಳ ಮೇಲೆ ಸಾಲ ಮತ್ತು ಇತರೆ ವಗ್ಯೆರೆಗಳನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆನಂ.38/1 ನನಗೆ ಸೇರಿದ ಜಮೀನು ಎಂದರೆ ಸರಿ. ಸರ್ವೆನಂ.57/4 ಜಮೀನು ಆಸ್ತಿ ನನಗೆ ಸೇರಿದ್ದು ಎಂದರೆ ಸರಿ. ಸದರಿ ಜಮೀನನ್ನು ದಿನಾಂಕ 08-08-2011 ರಂದು ಚಂದ್ರಪ್ಪ ತಂದೆ ತಿರಕಪ್ಪ ರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಹಿರೇಬೂದಿಹಾಳ ಗ್ರಾಮದಲ್ಲಿ ನಮಗೆ ಸರ್ವೆನಂ.38/1 ಹಾಗೂ 57/6 ಆಸ್ತಿಗಳು ಮಾತ್ರ ಉಳಿದಿರುತ್ತವೆ ಎಂದರೆ ಸರಿ.

2. ಆಲದಗೇರಿ ಕೋ ಆಪರೋಟಿವ್ ಬ್ಯಾಂಕ್ ನಲ್ಲಿ ಸರ್ವೆನಂ.38/1 ಕ್ಕೆ ಸಂಬಂದಿಸಿದಂತೆ 8 ಸಾವಿರ ರೂ ಸಾಲ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆನಂ.38/1 ಮತ್ತು 57/6 ರ ಆಸ್ತಿಗಳ ಮೇಲೆ ಹಿರೇಕೆರೂರು ಎಸ್ ಬಿ ಐ ಬ್ಯಾಂಕನಲ್ಲಿ 2 ಲಕ್ಷದ 50 ಸಾವಿರ ರೂ ಸಾಲ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಬ್ಯಾಂಕನಲ್ಲಿ ಸಾಲ ಪಡೆದುಕೊಳ್ಳಬೇಕಾದರೆ ಆಸ್ತಿಯ ಆ-ಖಾತಾ, ಪಹಣಿ ಪತ್ರಿಕೆ, ಡ ನಂಬರ, ಇತ್ತೀಚಿನ ಎಂ ಆರ್ ದಾಖಲೆಗಳನ್ನು ಕೊಟ್ಟಿದ್ದೆನು ಎಂದರೆ ಸರಿ. 2002 ರಿಂದ 2013 ಸಾಲನಲ್ಲಿ ದಾವಾ ಆಸ್ತಿಯ ಮೇಲೆ ಅದರ ದಾಖಲೆಗಳನ್ನು ಹಾಜರಪಡಿಸಿ ಸಾಲಗಳನ್ನು ಪಡೆದುಕೊಳ್ಳಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಆಗ ಸಾಲವನ್ನು ತೆಗೆದುಕೊಳ್ಳಲು ಪ್ರಯತ್ನಿಸಿದ್ದು, ಅದರ ಉತಾರ ಸಿಗದೇ ಇದ್ದ ಕಾರಣದಿಂದ ಸಾಲವನ್ನು ಪಡೆದುಕೊಳ್ಳಲು ಆಗಲಿಲ್ಲ ಎಂದು ನುಡಿದಿರುತ್ತಾರೆ.

3. ನನಗೆ ಈಗ 42 ವರ್ಷ. ನನಗೆ 18 ವರ್ಷ ತುಂಬಿದ ತಕ್ಷಣ ದಾವೆ ಯನ್ನು ಸಲ್ಲಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಆದರೆ ನನ್ನ ತಾಯಿ ಇರುವರೆಗೂ ನಾನು ಯಾವುದೇ ಆಸ್ತಿಯ ಬಗ್ಗೆ ದಾವೆಯನ್ನು ದಾಖಲಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿ ನಮಗೆ ಸೇರಿದ ಆಸ್ತಿ ಅಲ್ಲದೇ ಇದ್ದ ಕಾರಣದಿಂದ ಸದರಿ ಆಸ್ತಿಯ ಮೇಲೆ ಸಾಲವನ್ನು ಪಡೆದುಕೊಂಡಿಲ್ಲ ಎಂದರೆ ಸಾಕ್ಷಿಯು ದಾವಾ ಆಸ್ತಿಗೆ ಸಂಬಂದಿಸಿದಂತೆ ಉತಾರ ಬರದೇ ಇದ್ದ ಕಾರಣದಿಂದ ನಾನು ಸಾಲವನ್ನು ಪಡೆದುಕೊಂಡಿಲ್ಲ ಎಂದು ನುಡಿದಿರುತ್ತಾರೆ. 2002 ರಿಂದ 2013 ರವರೆಗೆ ದಾವಾ ಆಸ್ತಿಗೆ ಸಂಬಂದಿಸಿದಂತೆ ನಮ್ಮ ಹೆಸರು ಬರುತ್ತಿರಲಿಲ್ಲ. 2002 ರಿಂದ 2013 ರವರೆಗೆ ದಾವಾ ಆಸ್ತಿಯು ನಮ್ಮ ಹೆಸರಿನಲ್ಲಿ ಬರುತ್ತಿರಲಿಲ್ಲ ಎಂದು, ಆಗ ದಾವೆಯನ್ನು ಸಲ್ಲಿಸಲು ನನಗೆ ಯಾವುದೇ ತೊಂದರೆ

ಇರಲಿಲ್ಲ.

4. ದಿನಾಂಕ 09-03-1988 ರಂದು ದಾವಾ ಆಸ್ತಿಯನ್ನು ನನ್ನ ತಂದೆ ಪ್ರತಿವಾದಿಯರಿಗೆ ಮಾರಾಟ ಮಾಡಿರುವುದು ನನಗೆ ಗೊತ್ತಿರುವ ಕಾರಣದಿಂದ ನಾನು ಈ ದಾವೆಯನ್ನು ಈ ಮೊದಲು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಈಗ ನಮ್ಮ ಊರಿನ ಜಮೀನಗಳಿಗೆ ಬೆಲೆ ಹೆಚ್ಚಾಗಿರುತ್ತದೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಗೆ ಈಗ ಬೆಲೆ ಹೆಚ್ಚಾಗಿರುವ ಕಾರಣದಿಂದ ದಾವೆ ಹೂಡಿದರೆ ಪ್ರತಿವಾದಿಯರಿಂದ ಹೆಚ್ಚು ಹಣ ಪಡೆದುಕೊಳ್ಳಬಹುದು ಎಂಬ ದುರುದ್ದೇಶದಿಂದ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

5. ಸರ್ವೆನಂ.57/4 ರ ಆಸ್ತಿಯನ್ನು ಚಂದ್ರಪ್ಪ ತಂದೆ ತಿರಕಪ್ಪ ರವರಿಗೆ ಮಾರಾಟ ಮಾಡಿದಾಗ ದಾವಾ ಆಸ್ತಿಯು ನಮ್ಮ ಹೆಸರಿನಲ್ಲಿ ಇಲ್ಲಾ ಎಂಬುದರ ಬಗ್ಗೆ ನನ್ನ ಗಮನಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನಮಗೆ ಸೇರಿದ್ದು ಅಲ್ಲದಿದ್ದರೂ ಕೂಡ ಪ್ರತಿವಾದಿಯರಿಗೆ ಕಿರುಕುಳ ಕೊಡಬೇಕೆಂಬ ದುರುದ್ದೇಶದಿಂದ ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ನೀವು ಪ್ರಾಪ್ತ ವಯಸ್ಕಾನಾದ 3 ವರ್ಷದೊಳಗೆ ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಹೂಡಲು ಯಾವುದಾದರು ತೊಂದರೆ ಇತ್ತಾ ಎಂದರೆ, ಸಾಕ್ಷಿಯು ಇಲ್ಲ ಎಂದು ನುಡಿದಿದ್ದು ನಂತರ ಮುಂದುವರೆದು ನಮ್ಮ ತಾಯಿ ಇರುವವರೆಗೂ ಏನು ಮಾಡಬಾರದು ಎಂದು ಹೇಳಿ ನಾನು ದಾವೆಯನ್ನು ಹೂಡಿರುವುದಿಲ್ಲ ಎಂದು ನುಡಿದಿರುತ್ತಾರೆ.

6. ದಾವಾ ಆಸ್ತಿಯನ್ನು ಪ್ರತಿವಾದಿ 1 ರಿಂದ 4 ರವರು ಈಗಾಗಲೇ ಹಂಚಿಕೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಪ್ರತಿವಾದಿಯರ ಹೆಸರಿಗೆ ಎಂ ಆರ್ ನಂ.49/2006-07 ರಂತೆ ಖಾತೆ ಆಗಿರುತ್ತದೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪ್ರತಿವಾದಿ 5 ನೇದವರು ನನಗೆ ದಾಯಾದಿ ಆಗಬೇಕು. 5 ನೇ ಪ್ರತಿವಾದಿಯು 4 ನೇ ಪ್ರತಿವಾದಿಯಿಂದ ದಾವಾ ಆಸ್ತಿಯ ಸರ್ವೆನಂ.73 ರ ಪೈಕಿ 37 ಗುಂಟೆ ಜಮೀನನ್ನು ಖರೀದಿ ಮಾಡಿದ್ದು, ಸದರಿ ಜಮೀನಿನ ರಿ.ಸರ್ವೆನಂ.73/2 ಎ ಆಗಿರುತ್ತದೆ ಎಂದರೆ ಆ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಆಸ್ತಿಯಲ್ಲಿ ನನ್ನ ಅಣ್ಣನಾದ 5 ನೇ ಪ್ರತಿವಾದಿ ಸ್ವಾದೀನದಲ್ಲಿ ಇರುತ್ತಾರೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಅದೇ ರೀತಿ ಸರ್ವೆನಂ.73/2 ಬ, 73/2 ಕ ಆಸ್ತಿಗಳಲ್ಲಿ 1 ರಿಂದ 3 ನೇ ಪ್ರತಿವಾದಿಯರು ಸ್ವಾದೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಪ್ರತಿವಾದಿಯರು ಉತಾರವನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ನಮ್ಮ ತಂದೆ ಪ್ರತಿವಾದಿಯರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿದ್ದರು ಕೂಡ ಗೊತ್ತಿಲ್ಲ ಎಂದು ಸುಳುಳ ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ

ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.